ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **267/2020**

| | | |
|---|---|---|
| ಸಾಕ್ಷಿಯ ಹೆಸರು | : ದೇವರಾಜ್ | ಸಿ.ಡಬ್ಲ್ಯು 9 |
| ತಂದೆಯ ಹೆಸರು | : ಶೇಖರಪ್ಪ | ಪಿ.ಡಬ್ಲ್ಯು 7 |
| ವಯಸ್ಸು | : 32 ವರ್ಷ | |
| ಉದ್ಯೋಗ | : ಪೋಲೀಸ್ ಪೇದೆ | |
| ವಾಸ ಸ್ಥಳ | : ಸಖರಾಯಪಟ್ಟಣ | |

ದಿನಾಂಕಃ**13-1-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು 2016 ರಿಂದ 2021 ರ ಮದ್ಯದಲ್ಲಿ ತರೀಕೆರೆಯಲ್ಲಿ ಪೋಲೀಸ್ ಪೇದೆ ಎಂದು ಕೆಲಸ ಮಾಡಿದ್ದೇನೆ.

ಈ ಪ್ರಕರಣದಲ್ಲಿ ದಿಃ17-01-2020 ರಂದು ನನಗೂ ಮತ್ತು ಚಾಸಾ-9 ರವರಿಗೂ, ಚಾಸಾ-10 ರವರು ಈ ಪ್ರಕರಣದಲ್ಲಿ ಆರೋಪಿಗಳ ಪತ್ತೆಗಾಗಿ ವಿಶೇಷ ಕರ್ತವ್ಯದ ಮೇಲೆ ನಿಯೋಜನೆ ಮಾಡಿದ್ದರು. ಅದರಂತೆ ಬೆಳಗ್ಗೆ 11-00 ಗಂಟೆಗೆ ಠಾಣೆಯಿಂದ ಹೊರಟು ನಮ್ಮ ಠಾಣೆಯ ಬೇಲೆನಹಳ್ಳಿ ಮತ್ತು ಗಂಟೆ ಕಣಿವೆ ಪ್ರದೇಶದಲ್ಲಿ ಗಸ್ತು ಮಾಡುತ್ತಿದ್ದಾಗ ಅಲ್ಲಿ ನಮಗೆ ಯಾವುದೇ ಸರಿಯಾದ ಮಾಹಿತಿ ದೊರೆಯಲಿಲ್ಲ. ಕಾರಣ ಅಲ್ಲಿಂದ ಎಂ.ಸಿ.ಹಳ್ಳಿಯ ಕಡೆಗೆ ಹೋಗುತ್ತಿದ್ದಾಗ ಭದ್ರಾವತಿ ಕಡೆಯಿಂದ ಒಂದು ನೊಂದಣಿ ಇಲ್ಲದ ಡಿಯೊ ಸ್ಕೂಟಿಯಲ್ಲಿ ಇಬ್ಬರು ವ್ಯಕ್ತಿಗಳು ಬರುತ್ತಿರುವುದನ್ನು ಗಮನಿಸಿ ತಡೆದು ನಿಲ್ಲಿಸಿ ವಿಚಾರಿಸಲಾಗಿ ವ್ಯಕ್ತಿಗಳು ತಮ್ಮ ಹೆಸರುಗಳನ್ನು ಗಣೇಶ ಮತ್ತು ಸ್ವಾಮಿ ಎಂದು ತಿಳಿಸಿದರು. ಅವರುಗಳ ಖಾಯಂ ವಿಳಾಸವನ್ನು ಕೇಳಲಾಗಿ ಭದ್ರಾವತಿ ಎಂದು ತಿಳಿಸಿರುತ್ತಾರೆ . ನಮಗೆ ಬೇಕಾಗಿರುವ ವ್ಯಕ್ತಿಗಳು ಇವರೇ ಇರಬಹುದು ಎಂದು ಭಾವಿಸಿ ಇಬ್ಬರನ್ನು ತಂದು ಚಾಸಾ-10 ರವರ ಮುಂದೆ ನನ್ನ ವರದಿ ಮತ್ತು ವಾಹನದೊಂದಿಗೆ ಒಪ್ಪಿಸಿದ್ದೇನೆ. ವ್ಯಕ್ತಿಗಳ ಬಳಿ ವಾಹನಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳು ಇರಲಿಲ್ಲ ಮತ್ತು ಅದಕ್ಕೆ ನಂಬರ್ ಪ್ಲೇಟ್ ಕೂಡ ಇರಲಿಲ್ಲ. 2 ನೇ ಆರೋಪಿಯು ಸದರಿ ವಾಹನವು ಸದರಿ ವಾಹನವು ನನ್ನ ಅಕ್ಕನ ಹೆಸರಿನಲ್ಲಿ ಇದೆ ಎಂದು ತಿಳಿಸಿದನು . ವರದಿಯನ್ನು ನಿ.ಪಿ-12 ಎಂದು ಗುರುತಿಸಲಾಯಿತು. ನಿ.ಪಿ-6 ಮತ್ತು 7 ರಲ್ಲಿ ಕಾಣಿಸುವ ವಾಹನವನ್ನೇ ನಾವು ಹಾಜರುಪಡಿಸಿದ್ದೇವೆ. 2 ನೇ ಆರೋಪಿಯನ್ನು ನೋಡಿ ಗುರುತಿಸುತ್ತೇನೆ. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ( ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದಾರೆ.)

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ನನ್ನನ್ನು ನಮ್ಮ ಠಾಣೆಯ ಅಧಿಕಾರಿ ಆರೋಪಿಗಳ ಹುಡುಕಾಟಕ್ಕಾಗಿ ನೇಮಿಸಿಲ್ಲ ಎಂದರೆ ಸರಿಯಲ್ಲ. ನಮಗೆ ಬಾಯಿ ಮಾತಿನಿಂದ ಆದೇಶ ಕೊಟ್ಟಿದ್ದರು. ನಾವು ಅ ದಿನ ಆರೋಪಿಗಳ ಹುಡುಕಾಟಕ್ಕೆ ಹೋಗಿಲ್ಲ, ಆರೋಪಿಗಳನ್ನು ಗುರುತಿಸಿಲ್ಲ ಮತ್ತು ಅವರನ್ನು ಠಾಣೆಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ಕಡೆಯಿಂದ ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ ಮತ್ತು ಯಾವುದೇ ಆರೋಪಿ ಸದರಿ ವಾಹನ ನನ್ನ ಅಕ್ಕನ ಹೆಸರಿನಲ್ಲಿ ಇದೆ ಎಂದು ತಿಳಿಸಿಲ್ಲ ಎಂದರೆ ಸರಿಯಲ್ಲ. ಚಾಸಾ-10 ನನ್ನ ಮೇಲಾಧಿಕಾರಿಗಳು ಎಂದರೆ ಸರಿ, ಅವರು ಹೇಳಿದ ಹಾಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ **:**</u> ಇಲ್ಲಃ

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು**.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.